**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ2346/2025**

**ಸಿ.ಡಬ್ಲ್ಯೂಃ 1, ಪಿ.ಡಬ್ಲ್ಯೂಃ 1**

ಸಾಕ್ಷಿದಾರರ ಹೆಸರು : ಮನೋಜ್ ಕುಮಾರ್ ಕೆ ಪಿ

ತಂದೆಯ ಹೆಸರು : ತಂಕಪ್ಪನ್

ವಯಸ್ಸು : 42 ವರ್ಷ

ಉದ್ಯೋಗ : ಖಾಸಗಿ ಬಸ್ ಕಂಡಕ್ಟರ್

ವಾಸ್ತವ್ಯ : ಕತಿರುಮ್ಮಲ್ , ವಲಿಯಪರಂಬ್ , ಕಾಸರಗೋಡ , ಕೇರಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 11/12/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 22.04.2025 ರಂದು ಕಾರು ನಂಬರ್ 60 ಯು 9510 ನಲ್ಲಿ ನಾನು ಮೂರ್ಡೇಶ್ವರ ದಿಂದ ಮಂಗಳೂರು ಮೂಲಕ ಕೇರಳಕ್ಕೆ ಹೋಗುವಾಗ ಮಣ್ಕುಳಿ ಬೈ ಪಾಸ್ ಹತ್ತಿರ ಆರೋಪಿ ತನ್ನ ಸ್ಕೂಟರಿನ ಮೇಲೆ ಹಿಂದೆ ಚಾಸಾ 7 ರವರನ್ನು ಕುಳ್ಳಿಸಿಕೊಂಡು ಹೋಗುವಾಗ ನನ್ನ ಕಾರಿಗೆ ಅಡ್ಡವಾಗಿ ಬಂದು ಕಾರಿಗೆ ಡಿಕ್ಕಿ ಪಡಿಸಿರುತ್ತಾರೆ. ಸದರಿ ಅಪಘಾತದಲ್ಲಿ ಆರೋಪಿಗೆ ಹಾಗೂ ಚಾಸಾ 7 ರವರಿಗೆ ಗಾಯ ಮಾಡಿಕೊಂಡಿರುತ್ತಾರೆ. ನಾನು ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ.

2. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ- 1 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಗುನ್ನಾ ಸ್ಥಳದ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ- 2 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 2 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪೊಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ- 3,4 6 ಮತ್ತು 7 ಎಂದು ಗುರುತಿಸಲಾಯಿತು. ಸಾಕ್ಷಿಯು ವಾಹನ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ- 5 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 5 ಎ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಆರೋಪಿ ಪರ ಶ್ರೀ  ಆರ್ ಎಸ ಎಮ್  ವಕೀಲರಿಂದ,</u>**

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನನಗೆ ಭಟ್ಕಳದ ಊರಿನ ಬಗ್ಗೆ ಯಾವುದೇ ಮಾಹಿತಿ ಇಲ್ಲಾ. ಗುನ್ನಾ ಸ್ಥಳದಲ್ಲಿ ಕ್ರಾಸ್ ಇದೆ ಹಾಗೂ ಅಲ್ಲಿ ಹೊಟೇಲು ಇದೆ. ಅಲ್ಲಿ ಜನಸಂಚಾರ ಇದೆ. ಕಾರನ್ನು ನಾನು ಅತೀ ವೇಗವಾಗಿ ಚಲಾಯಿಸುತ್ತಿದ್ದೇನು  ಎಂದರೆ ಸರಿಯಲ್ಲ. ಗುನ್ನಾ ಸ್ಥಳದಲ್ಲಿ ಬಂದ ಪಂಚರ ಪರಿಚಯ ನನಗೆ ಇಲ್ಲಾ. ಬೈಕ ಸವಾರನ ಹೆಸರು ಮತ್ತು ವಿಳಾಸ ನನಗೆ ಗೊತ್ತಿರಲಿಲ್ಲಾ. ದೂರನ್ನು ದಾಖಲಿಸುವ ಕಾಲಕ್ಕೆ ಪಿರ್ಯಾದಿದಾರರು ಹೇಳಿದಂತೆ ನಾನು (ವಲ್ಸನ್ ನಾಯರ್, ಹುರುಳಿಸಾಲ , ಭಟ್ಕಳ, ಮೋ ನಂ. 9945128199) ಮಲಿಯಾಳಂ ಅನ್ನು ಕನ್ನಡದಲ್ಲಿ ಅನುವಾಧ ಮಾಡಿ ದೂರನ್ನು ಹೇಳಿ ಬರೆಯಿಸಿರುತ್ತೇನೆ. ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ರಾಷ್ಟ್ರೀಯ ಹೆದ್ದಾರಿ ಇದ್ದರೂ ಸಹ ಆಚೆ ಈಚೆ ನೋಡದೇ ಬೈಕ ಸವಾರನಿಗೆ ಡಿಕ್ಕಿಪಡಿಸಿರುತ್ತೇನೆ ಎಂದರೆ ಸರಿಯಲ್ಲ.  ಪರಿಹಾರ ನೀಡಬೇಕಾಗುತ್ತದೆ ಎಂದು ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಚಾಸಾ  1 ರವರು ಮಲಿಯಾಳಂ ಭಾಷೆಯಲ್ಲಿ ಹೇಳಿದ್ದನ್ನು ವಲ್ಸನ್ ನಾಯರ್, ಹುರುಳಿಸಾಲ , ಭಟ್ಕಳ, ಮೋ ನಂ. 9945128199) ರವರು ಕನ್ನಡದಲ್ಲಿ ಅನುವಾಧ ಮಾಡಿ ನ್ಯಾಯಾಲಯಕ್ಕೆ ಹೇಳಿರುತ್ತಾರೆ).**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**